**ಮಾನ್ಯ ಕರ್ನಾಟಕ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಎಂ.ಎ.ಗೋಪಾಲಸ್ವಾಮಿರವರು ನಿಯಮ 330 ರಡಿಯಲ್ಲಿ ನೀಡಿರುವ ಸೂಚನಾ ಪತ್ರಕ್ಕೆ ಉತ್ತರ ನೀಡುವ ಬಗ್ಗೆ.**

**ವಿಷಯ:-**

ಹಾಸನ ಜಿಲ್ಲೆ ಚನ್ನರಾಯಪಟ್ಟಣ ತಾಲ್ಲೂಕು, ಶ್ರೀನಿವಾಸಪುರದಲ್ಲಿ ಇರುವ ಹೇಮಾವತಿ ಸಹಕಾರಿ ಸಕ್ಕರೆ ಕಾರ್ಖಾನೆಯ ಗುತ್ತಿಗೆಯನ್ನು ಮೆ|| ಚಾಮುಂಡೇಶ್ವರಿ ಶುಗರ್ಸ್ ಲಿ., ಬೆಂಗಳೂರು ಇವರು 30 ವರ್ಷಗಳ ಅವಧಿಗೆ ದಿನಾಂಕ 23.10.2007 ರಂದು ತೆಗೆದುಕೊಂಡು ನಡೆಸುತ್ತಿದ್ದಾರೆ. ಸದರಿ ಚಾಮುಂಡೇಶ್ವರಿ ಶುಗರ್ಸ್ ಕರಾರಿನಂತೆ ನಡೆದುಕೊಳ್ಳದೇ, ಕಾಯ್ದೆಯ ಹಲವು ನಿಯಮಗಳನ್ನು ಗಾಳಿಗೆ ತೂರಿಕಾರ್ಯ ನಿರ್ವಹಿಸಿದ ಕಾರ್ಖಾನೆ ಆಡಳಿತ ಮಂಡಳಿ ಮೊದಲಿನಿಂದಲೂ ನಿಯಮಗಳನ್ನು ಸಮರ್ಪಕವಾಗಿ ಪಾಲಿಸಿಲ್ಲ. ಹಲವು ವಿಷಯದಲ್ಲಿ ಲೆಕ್ಕ ಪರಿಶೋಧಕರು ಆಕ್ಷೇಪ ವ್ಯಕ್ತಪಡಿಸಿರುತ್ತಾರೆ ಹಾಗೂ ಸಹಕಾರ ಕಾಯ್ದೆಗಳನ್ನು ಪಾಲಿಸುವುದು ಕಡ್ಡಾಯವಾಗಿದ್ದರೂ ಸಹ ಅದರ ಬಗ್ಗೆ ಇಂತಹ ಹಲವು ನಿರ್ಲಕ್ಷ್ಯಗಳಿಂದಲೇ ಕಾರ್ಖಾನೆಯು ದುಸ್ಥಿತಿಗೆ ತಲುಪಿ ಗಮನಹರಿಸಿರುವುದಿಲ್ಲ. ಕೆಲವು ದಿನಗಳಲ್ಲಿ ಕಾರ್ಖಾನೆ ನಗದು ಮಿತಿಯನ್ನು ಮೀರಿ ವ್ಯವಹಾರ ನಡೆಸುವ ಮೂಲಕ ಬೈಲಾ ಉಲ್ಲಂಘಿಸಿರುತ್ತದೆ. ನಗರದ ವ್ಯವಹಾರ ನಿರ್ವಹಿಸುವವರಿಂದ ಭದ್ರತೆ ಕೂಡ ಪಡೆದಿರುವುದಿಲ್ಲ. ಚಾಮುಂಡೇಶ್ವರಿ ಶುಗರ್ಸ್ ಸಂಸ್ಥೆ 2014-15 ರಿಂದ ಇಲ್ಲಿಯವರೆವಿಗೂ ಸುಮಾರು ರೂ.26 ಕೋಟಿಯನ್ನು ಆಡಳಿತ ಮಂಡಳಿಗೆ ಬಾಡಿಗೆ ಪಾವತಿಸದೆ ಬಾಕಿ ಉಳಿಸಿಕೊಂಡಿರುತ್ತದೆ. ಆದರೆ ಸಂಸ್ಥೆ ಒಂದು ವರ್ಷವೂ ಸಹ ನಿಗದಿತ ಸಮಯಕ್ಕೆ ಸರಿಯಾಗಿ ಆಡಳಿತ ಮಂಡಳಿಗೆ ಹಣ ನೀಡಿದ ಉದಾಹರಣೆಯೇ ಇಲ್ಲದಾಗಿದೆ. 2007ರ ನವೆಂಬರ್ 28 ರಿಂದ ಕಬ್ಬು ಅರೆಯುವಿಕೆ ಆರಂಭಿಸಿದ ಸಂಸ್ಥೆ 2008ರ ಜೂನ್ 11 ರವರೆಗೆ 2,12,669 ಟನ್ ಕಬ್ಬು ಅರೆದು 1,98,360 ಕ್ವಿಂಟಾಲ್ ಸಕ್ಕರೆ ಉತ್ಪಾದಿಸಿತ್ತು. ಇದರಿಂದ ರೈತರು ಕಾರ್ಖಾನೆಯನ್ನು ಖಾಸಗಿ ಸಂಸ್ಥೆ ದಕ್ಷತೆಯಿಂದ ನಡೆಸಲಿದೆ ಎಂಬ ಭಾವನೆಯನ್ನು ಹೊಂದಿದ್ದರು. ಆದರೆ, ಈವರೆಗೂ ಸಹಕಾರ ಕಾರ್ಖಾನೆಯ ಯಂತ್ರೋಪಕರಣಗಳನ್ನು ಉಪಯೋಗಿಸಿಕೊಂಡ ಖಾಸಗಿ ಸಂಸ್ಥೆ ಈಗ ಅದನ್ನು ರೋಗಗ್ರಸ್ತಗೊಳಿಸಿ ಬಾಗಿಲು ಹಾಕಿರುವ ಬಗ್ಗೆ.

**ಸರ್ಕಾರದ ಉತ್ತರ:-**

ಹೇಮಾವತಿ ಸಹಕಾರಿ ಸಕ್ಕರೆ ಕಾರ್ಖಾನೆಯು ಸಹಕಾರ ಸಂಘಗಳ ಕಾಯ್ದೆಯಡಿಯಲ್ಲಿ 1973ನೇ ಸಾಲಿನಲ್ಲಿ ನೋಂದಣಿಯಾಗಿರುತ್ತದೆ. ಈ ಕಾರ್ಖಾನೆಯ ಕಬ್ಬು ಅರೆಯುವ ಸಾಮರ್ಥ್ಯ 1250 ಟಿಸಿಡಿಗಳಾಗಿರುತ್ತದೆ. ಕಾರ್ಖಾನೆಯ ಕಾರ್ಯವ್ಯಾಪ್ತಿಯು ಹಾಸನ ಜಿಲ್ಲೆಯ ಎಲ್ಲಾ ತಾಲ್ಲೂಕುಗಳು, ಮಂಡ್ಯ ಜಿಲ್ಲೆಯ ನಾಗಮಂಗಲ, ಕೆ.ಆರ್.ಪೇಟೆ ತಾಲ್ಲೂಕುಗಳು ಹಾಗೂ ತುಮಕೂರು ಜಿಲ್ಲೆಯ ತುರುವೇಕೆರೆ ಮತ್ತು ತಿಪಟೂರು ತಾಲ್ಲೂಕುಗಳನ್ನು ಹೊಂದಿರುತ್ತದೆ. ಕಾರ್ಖಾನೆಯ ಒಟ್ಟು ಷೇರುದಾರ ಸದಸ್ಯರ ಸಂಖ್ಯೆ 29658 ಆಗಿರುತ್ತದೆ. ಈ ಕಾರ್ಖಾನೆಯ ಒಟ್ಟು ಷೇರು ಬಂಡವಾಳ ರೂ.9.94 ಕೋಟಿಗಳಷ್ಟಿದ್ದು, ಈ ಪೈಕಿ ಸರ್ಕಾರದ ಷೇರು ಬಂಡವಾಳ ರೂ.2.19 ಕೋಟಿಗಳು ಮತ್ತು ಸದಸ್ಯರ ಷೇರು ಬಂಡವಾಳ ರೂ.7.75 ಕೋಟಿಗಳಷ್ಟಿರುತ್ತದೆ. ಕಾರ್ಖಾನೆಯು ಸಹಕಾರಿ ರಂಗದಲ್ಲಿ 1984-85ನೇ ಸಾಲಿನಿಂದ ಕಬ್ಬು ಅರೆಯುವ ಕಾರ್ಯವನ್ನು ಪ್ರಾರಂಭಿಸಿ, 2006-07ನೇ ಸಾಲಿನವರೆಗೆ ಕಾರ್ಯವನ್ನು ನಿರ್ವಹಿಸಿರುತ್ತದೆ.

...2/

ಹೇಮಾವತಿ ಸಹಕಾರಿ ಸಕ್ಕರೆ ಕಾರ್ಖಾನೆ ನಿ., ಶ್ರೀನಿವಾಸಪುರ, ಚನ್ನರಾಯಪಟ್ಟಣ ತಾಲ್ಲೂಕು, ಹಾಸನ ಜಿಲ್ಲೆ ಈ ಕಾರ್ಖಾನೆಯನ್ನು ದುಡಿಯುವ ಬಂಡವಾಳದ ಕೊರತೆ ಮತ್ತು ಸಮರ್ಪಕವಾಗಿ ಕಾರ್ಯ ನಿರ್ವಹಣೆ ಮಾಡದೇ ಇದ್ದುದರಿಂದ ಈ ಭಾಗದ ಕಬ್ಬು ಬೆಳೆಗಾರ ರೈತರು ಮತ್ತು ಕಾರ್ಮಿಕರ ಹಿತದೃಷ್ಟಿಯನ್ನು ಗಮನದಲ್ಲಿಟ್ಟುಕೊಂಡು ಸರ್ಕಾರವು ಕಾರ್ಖಾನೆಯನ್ನು ಪುನ:ಶ್ಚೇತನಗೊಳಿಸಲು ತೀರ್ಮಾನಿಸಿ, ಮೆ|| ಚಾಮುಂಡೇಶ್ವರಿ ಶುಗರ್ಸ್ ಲಿ., ಬೆಂಗಳೂರು ಇವರಿಗೆ ಎಲ್.ಆರ್.ಓ.ಟಿ. ಆಧಾರದ ಮೇಲೆ ರೂ.106.66 ಕೋಟಿಗಳಿಗೆ 2007-08ನೇ ಹಂಗಾಮಿನಿಂದ 30 ವರ್ಷಗಳ ಅವಧಿಗೆ ಗುತ್ತಿಗೆ ಆಧಾರದ ಮೇಲೆ ನೀಡಿರುತ್ತದೆ. ಕಾರ್ಖಾನೆ ಮತ್ತು ಗುತ್ತಿಗೆದಾರರ ಮಧ್ಯೆ ದಿನಾಂಕ 26.10.2007 ರಂದು ಗುತ್ತಿಗೆ ಒಪ್ಪಂದ ಏರ್ಪಟ್ಟಿರುತ್ತದೆ.

ಗುತ್ತಿಗೆದಾರರು ಗುತ್ತಿಗೆ ಒಪ್ಪಂದದ ಕರಾರು ಸಂಖ್ಯೆ 23ರ ಪ್ರಕಾರ ಪ್ರತಿ ಕಬ್ಬು ಅರೆಯುವ ಹಂಗಾಮನ್ನು ಪ್ರಾರಂಭಿಸುವ ಒಂದು ತಿಂಗಳು ಮೊದಲೇ ವಾರ್ಷಿಕ ಗುತ್ತಿಗೆ ಮೊತ್ತವನ್ನು ಪಾವತಿಸಬೇಕಾಗಿರುತ್ತದೆ. ಈ ಕಾರ್ಖಾನೆಯು ಸಾಮಾನ್ಯವಾಗಿ ಪ್ರತಿ ವರ್ಷ ಜುಲೈ ತಿಂಗಳಲ್ಲಿ ಕಬ್ಬು ಅರೆಯಲು ಪ್ರಾರಂಭಿಸುವುದರಿಂದ ಜೂನ್ ತಿಂಗಳಲ್ಲಿಯೇ ವಾರ್ಷಿಕ ಗುತ್ತಿಗೆ ಮೊತ್ತವನ್ನು ಪಾವತಿಸಬೇಕಾಗಿರುತ್ತದೆ. ಗುತ್ತಿಗೆದಾರರು ಕಾರ್ಖಾನೆಯನ್ನು ಗುತ್ತಿಗೆ ಪಡೆದಾಗಿನಿಂದ ಗುತ್ತಿಗೆ ಕರಾರಿನ ಪ್ರಕಾರ ಪ್ರತಿ ವರ್ಷ ಪಾವತಿಸಬೇಕಾದ ಗುತ್ತಿಗೆ ಮೊತ್ತ, ಪಾವತಿಸಿರುವ ಮೊತ್ತ ಮತ್ತು ಪಾವತಿಸಲು ಬಾಕಿಯಿರುವ ಮೊತ್ತದ ವಿವರ ಈ ಕೆಳಕಂಡಂತಿದೆ.

| ವರ್ಷ | ಗುತ್ತಿಗೆ ಮೊಬಲಗು ಕರಾರಿನಂತೆ ಪಾವತಿಸಬೇಕಾದ ದಿನಾಂಕ | ಗುತ್ತಿಗೆ ಮೊಬಲಗು (ಲಕ್ಷಗಳಲ್ಲಿ) | ಗುತ್ತಿಗೆ ಮೊಬಲಗು ಜಮಾ ಮಾಡಿದ ದಿನಾಂಕ | ಜಮಾ ಮಾಡಿದ ಗುತ್ತಿಗೆ ಮೊಬಲಗು (ರೂ.ಗಳಲ್ಲಿ) | ಜಮಾ ಮಾಡಬೇಕಾದ ಬಾಕಿ ಗುತ್ತಿಗೆ ಮೊಬಲಗು (ರೂ.ಗಳಲ್ಲಿ) |
|---|---|---|---|---|---|
| 1 | 2 | 3 | 4 | 5 | 6 |
| 2007–08 | 28–10–2007 | 320.00 | 05–05–2008 | 2,79,26,275 | |
| | | | 13–07–2008 | 22,16,750 | – |
| | | | 22–08–2008 | 3,09,000 | |
| | | | 12–11–2009 | 15,47,975 | |
| | | | **ಒಟ್ಟು** | **3,20,00,000** | |
| 2008–09 | 12–08–2008 | 328.00 | 16–02–2009 | 22,16,750 | |
| | | | 12–11–2009 | 22,50,000 | – |
| | | | 31–12–2009 | 2,50,20,000 | |
| | | | | 33,13,250 | |
| | | | **ಒಟ್ಟು** | **3,28,00,000** | |
| 1 | 2 | 3 | 4 | 5 | 6 |
| 2009–10 | 29–05–2009 | 336.00 | 06–09–2010 | 75,60,000 | |
| | | | 30–09–2010 | 25,11,600 | |
| | | | 05–10–2010 | 25,11,600 | |
| | | | 02–11–2010 | 25,36,800 | – |
| | | | 30–11–2010 | 75,60,000 | |
| | | | 07–12–2010 | 75,60,000 | |
| | | | | 33,60,000 | |
| | | | **ಒಟ್ಟು** | **3,36,00,000** | |

...3/

| | | | | | |
|---|---|---|---|---|---|
| 2010-11 | 11-07-2010 | 345.00 | 04-03-2011 | 77,62,500 | |
| | | | 21-06-2011 | 77,62,500 | |
| | | | 18-10-2011 | 77,62,500 | – |
| | | | 05-12-2011 | 77,62,500 | |
| | | | | 34,50,000 | |
| | | | ಒಟ್ಟು | **3,45,00,000** | |
| 2011-12 | 02-08-2011 | 353.00 | 11-04-2012 | 1,04,28,402 | |
| | | | 03-09-2012 | 1,06,70,798 | – |
| | | | 24-09-2012 | 1,06,70,797 | |
| | | | | 35,30,003 | |
| | | | ಒಟ್ಟು | **3,53,00,000** | |
| 2012-13 | 03-07-2012 | 362.00 | 05-12-2012 | 54,30,000 | |
| | | | 19-12-2012 | 54,30,000 | |
| | | | 12-03-2013 | 54,30,000 | |
| | | | 15-04-2013 | 54,30,000 | |
| | | | 10-03-2014 | 10,00,000 | |
| | | | 10-03-2014 | 10,00,000 | |
| | | | 10-03-2014 | 10,00,000 | – |
| | | | 10-03-2014 | 10,00,000 | |
| | | | 17-03-2014 | 10,00,000 | |
| | | | 26-12-2013 | 10,00,000 | |
| | | | 26-12-2013 | 10,00,000 | |
| | | | 10-03-2014 | 10,00,000 | |
| | | | 26-12-2013 | 8,60,000 | |
| | | | 01-08-2014 | 10,00,000 | |
| | | | 01-08-2014 | 10,00,000 | |
| | | | 01-08-2014 | 36,20,000 | |
| | | | ಒಟ್ಟು | **3,62,00,000** | |
| 2013-14 | 22-07-2013 | 371.00 | 31-03-2014 | 94,00,090 | |
| | | | 05-01-2015 | 20,00,000 | – |
| | | | 07-11-2015 | 50,00,000 | |
| 1 | 2 | 3 | 4 | 5 | 6 |
| | | | 11-12-2015 | 50,00,000 | |
| | | | 07-11-2015 | 67,89,910 | – |
| | | | 01-01-2016 | 50,00,000 | |
| | | | ಒಟ್ಟು | **3,71,00,000** | |
| 2014-15 | 05-08-2014 | 380.00 | 21-03-2016 | 93,48,514 | 1,24,18,870 |
| | | | 31-03-2018 | 1,62,32,616 | |
| | | | ಒಟ್ಟು | **2,55,81,130** | |

...4/

| | | | | | |
|---|---|---|---|---|---|
| 2015–16 | 25–08–2015 | 390.00 | – | | 3,90,00,000 |
| 2016–17 | 01–07–2016 | 400.00 | | | 4,00,00,000 |
| 2017–18 | 01–07–2017 | 410.00 | – | | 4,10,00,000 |
| 2018–19 | 01–07–2018 | 420.00 | – | | 4,20,00,000 |
| 2019–20 | 01–07–2019 | 430.00 | – | | 4,30,00,000 |
| 2020–21 | 01–07–2020 | 441.00 | – | | 4,41,00,000 |
| | **ಒಟ್ಟು** | **5286.00** | **–** | **26,70,82,000** | **26,15,18,000** |

ಗುತ್ತಿಗೆ ಒಪ್ಪಂದದ ಷರತ್ತು ಸಂಖ್ಯೆ (2)ರ ಪ್ರಕಾರ ಗುತ್ತಿಗೆದಾರರು ಮೊದಲ ಹಂತದಲ್ಲಿ ಕಬ್ಬು ಅರೆಯುವ ಸಾಮರ್ಥ್ಯವನ್ನು 1250 ಟಿಸಿಡಿಯಿಂದ 2500 ಟಿಸಿಡಿಗೆ ವಿಸ್ತರಣೆಯನ್ನು ಗುತ್ತಿಗೆ ಒಪ್ಪಂದವಾದ ದಿನಾಂಕದಿಂದ 4 ವರ್ಷದೊಳಗಾಗಿ ಮತ್ತು ಎರಡನೇ ಹಂತದ ವಿಸ್ತರಣೆಯನ್ನು ಮುಂದಿನ 5 ವರ್ಷದೊಳಗಾಗಿ ಕೈಗೆತ್ತಿಕೊಂಡು ಪೂರ್ಣಗೊಳಿಸಬೇಕಾಗಿರುತ್ತದೆ. ಇದಲ್ಲದೆ ಗುತ್ತಿಗೆದಾರರು ಮೊದಲ ಹಂತದಲ್ಲಿ 15 ಮೆ.ವ್ಯಾಟ್ ಸಹ ವಿದ್ಯುತ್ ಘಟಕವನ್ನು ಸ್ಥಾಪಿಸಿ, ಎರಡನೇ ಹಂತದಲ್ಲಿ ಇದರ ಸಾಮರ್ಥ್ಯವನ್ನು 21 ಮೆ.ವ್ಯಾಟ್‌ವರೆಗೂ ವಿಸ್ತರಿಸಬೇಕಾಗಿರುತ್ತದೆ.

ಗುತ್ತಿಗೆ ಒಪ್ಪಂದದ ಪ್ರಕಾರ ಎರಡು ಹಂತಗಳಲ್ಲಿ ವಿಸ್ತರಣಾ ಕಾರ್ಯವನ್ನು ಕೈಗೊಂಡು 2016-17ನೇ ಹಂಗಾಮಿಗೆ ಪೂರ್ವದಲ್ಲಿ ಪೂರ್ಣಗೊಳಿಸಬೇಕಾಗಿತ್ತು. ಆದರೆ ಗುತ್ತಿಗೆದಾರರು ಕಾರ್ಖಾನೆಯ ಆಧುನೀಕರಣ ಮತ್ತು ವಿಸ್ತರಣಾ ಕಾರ್ಯವನ್ನು ಎರಡು ಹಂತಗಳಲ್ಲಿ ಮಾಡುವ ಬದಲಾಗಿ 2015-16ನೇ ಸಾಲಿನಿಂದ ಒಂದೇ ಹಂತದಲ್ಲಿ ವಿಸ್ತರಣಾ ಕಾರ್ಯವನ್ನು ಕೈಗೊಂಡಿರುತ್ತಾರೆ. ಹಣಕಾಸು ಸಂಸ್ಥೆಗಳಿಂದ ಅವಧಿ ಸಾಲ ಹೊಂದಾಣಿಕೆ ಆಗದೇ ಇದ್ದುದು, ನೋಟು ಅಮಾನೀಕರಣ, ಯೋಜನಾ ಗಾತ್ರದ ಹೆಚ್ಚಳ ಹಾಗೂ ಕೋವಿಡ್-19 ಸಾಂಕ್ರಾಮಿಕ ರೋಗ, ಇನ್ನಿತರೆ ಕಾರಣಗಳಿಂದಾಗಿ ನಿಗದಿತ ಅವಧಿಯೊಳಗೆ ವಿಸ್ತರಣಾ ಕಾರ್ಯವನ್ನು ಕೈಗೊಳ್ಳಲು ಸಾಧ್ಯವಾಗಿರುವುದಿಲ್ಲ ಎಂದು ಗುತ್ತಿಗೆದಾರರು ತಿಳಿಸಿರುತ್ತಾರೆ.

ಕಾರ್ಖಾನೆಯ ಆಧುನೀಕರಣ ಮತ್ತು ವಿಸ್ತರಣಾ ಕಾರ್ಯದಿಂದಾಗಿ 2015-16ನೇ ಹಂಗಾಮಿನಿಂದ ಕಾರ್ಖಾನೆಯ ಕಬ್ಬು ಅರೆಯುವ ಕಾರ್ಯವನ್ನು ಸ್ಥಗಿತಗೊಳಿಸಿದ್ದರೂ, ಕಾರ್ಖಾನೆಯ ಕಾರ್ಮಿಕರಿಗೆ ವೇತನ ಮತ್ತು ಭತ್ಯೆಗಳನ್ನು ಈವರೆವಿಗೂ ಪಾವತಿಸಲಾಗಿರುತ್ತದೆ. ಈ ಸಂಬಂಧ ಸುಮಾರು ರೂ.34.55 ಕೋಟಿಗಳಷ್ಟು ವೆಚ್ಚವಾಗಿರುತ್ತದೆ. ಇದಲ್ಲದೆ, ಕಾರ್ಖಾನೆಯ ಕಾರ್ಯವ್ಯಾಪ್ತಿಯಲ್ಲಿ ಬೆಳೆದಂತಹ ಪೂರ್ಣ ಕಬ್ಬನ್ನು ಮದ್ದೂರು ತಾಲ್ಲೂಕಿನ ಕೆ.ಎಂ.ದೊಡ್ಡಿಯಲ್ಲಿರುವ ಮೆ|| ಚಾಮುಂಡೇಶ್ವರಿ ಶುಗರ್ಸ್ ಲಿ., ರವರ ಮತ್ತೊಂದು ಸಕ್ಕರೆ ಘಟಕಕ್ಕೆ ಸಾಗಾಣಿಕೆ ಮಾಡಿ ನುರಿಸಲಾಗಿರುತ್ತದೆ. ಈ ಸಂಬಂಧ ಗುತ್ತಿಗೆದಾರರು ಕಬ್ಬು ಕಟಾವು ಮತ್ತು ಸಾಗಾಣಿಕೆ ವೆಚ್ಚದ ಬಾಬ್ತು ಅಂದಾಜು ರೂ.11.48 ಕೋಟಿಗಳನ್ನು ಭರಿಸಿ ರೈತರ ಕಬ್ಬನ್ನು ಸಕಾಲದಲ್ಲಿ ನುರಿಸಲಾಗಿದೆ. ಇದರಿಂದಾಗಿ ಕಾರ್ಖಾನೆ ವ್ಯಾಪ್ತಿಯ ಕಬ್ಬು ಬೆಳೆಗಾರರಿಗೆ ಮತ್ತು ಕಾರ್ಮಿಕರಿಗೆ ಯಾವುದೇ ತೊಂದರೆಯಾಗಿರುವುದಿಲ್ಲವೆಂದು ಗುತ್ತಿಗೆದಾರರು ತಿಳಿಸಿರುತ್ತಾರೆ.

...5/

ಮೆ|| ಚಾಮುಂಡೇಶ್ವರಿ ಶುಗರ್ಸ್‌ರವರು ಕಾರ್ಖಾನೆಯ ಆಧುನೀಕರಣ ಮತ್ತು ವಿಸ್ತರಣಾ ಕಾರ್ಯವನ್ನು ಪೂರ್ಣಗೊಳಿಸಿ, 3500 ಟಿಸಿಡಿ ಸಕ್ಕರೆ ಘಟಕ ಮತ್ತು 21 ಮೆ.ವ್ಯಾಟ್ ಸಹ ವಿದ್ಯುತ್ ಘಟಕವನ್ನು ಸ್ಥಾಪಿಸಿರುತ್ತಾರೆ. ಇದರ ಪ್ರಾಯೋಗಿಕ ಕಾರ್ಯವನ್ನು ದಿನಾಂಕ 22.03.2020 ರಂದು ಪ್ರಾರಂಭಿಸಲು ಉದ್ದೇಶಿಸಲಾಗಿತ್ತು. ಪ್ರಾರಂಭ ಪೂರ್ವದಲ್ಲಿ ಎಲ್ಲಾ ಯಂತ್ರೋಪಕರಣಗಳ ತಾತ್ಕಾಲಿಕ ಪರಿಶೀಲನೆ ಕೈಗೊಳ್ಳುತ್ತಿದ್ದ ಸಂದರ್ಭದಲ್ಲಿ ಧೂಳು ಫಿಲ್ಟರ್ E.S.P. (Dust Catcher) ಘಟಕ ದಿನಾಂಕ 15.03.2020 ರಂದು ಸಿಡಿದು ಬಿದ್ದಿರುತ್ತದೆ. ಸದರಿ ಯಂತ್ರದ ಹಾನಿಯಿಂದಾಗಿ ನಿಗದಿತ ಕಾಲಾವಧಿಯೊಳಗೆ ಕಬ್ಬು ನುರಿಸುವ ಕಾರ್ಯವನ್ನು ಪ್ರಾರಂಭಿಸಲು ಸಾಧ್ಯವಾಗಿರುವುದಿಲ್ಲ. ಪ್ರಸ್ತುತ ದಿನಾಂಕ 14.09.2020 ರಂದು ಬಾಯ್ಲರ್ ಪ್ರದೀಪನ ಪೂಜೆಯನ್ನು ಕೈಗೊಳ್ಳಲಾಗಿರುತ್ತದೆ. ಕಬ್ಬು ಅರೆಯುವ ಕಾರ್ಯವನ್ನು ಸೆಪ್ಟೆಂಬರ್ ಅಂತ್ಯದೊಳಗೆ ಕೈಗೊಳ್ಳುವುದಾಗಿ ಮೆ|| ಚಾಮುಂಡೇಶ್ವರಿ ಶುಗರ್ಸ್ ಲಿ., ರವರು ತಿಳಿಸಿರುತ್ತಾರೆ.

ಮೆ|| ಚಾಮುಂಡೇಶ್ವರಿ ಶುಗರ್ಸ್‌ರವರು ಗುತ್ತಿಗೆ ಒಪ್ಪಂದದ ಷರತ್ತುಗಳನ್ನು ಉಲ್ಲಂಘಿಸಿರುವ ಬಗ್ಗೆ ಕಾರ್ಖಾನೆಯ ವ್ಯವಸ್ಥಾಪಕ ನಿರ್ದೇಶಕರು ಪ್ರತಿ ಮಾಹೆ ನೋಟೀಸುಗಳನ್ನು ನೀಡಿರುತ್ತಾರೆ. ದಿನಾಂಕ 03.05.2020 ಮತ್ತು 18.05.2020 ರಂದು ಆಯುಕ್ತರು ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರ ಅಧ್ಯಕ್ಷತೆಯಲ್ಲಿ ಸಭೆಗಳನ್ನು ನಡೆಸಿ, ಕಾರ್ಖಾನೆಯನ್ನು ರೈತರ ಹಿತದೃಷ್ಟಿಯಿಂದ ಜರೂರಾಗಿ ಪ್ರಾರಂಭಿಸಲು ಮತ್ತು ಕಾರ್ಖಾನೆ ಪ್ರಾರಂಭಿಸುವ ಮುಂಚಿತವಾಗಿ ಬಾಕಿಯಿರುವ ಗುತ್ತಿಗೆ ಮೊಬಲಗನ್ನು ಪಾವತಿಸಲು ಸೂಚನೆಗಳನ್ನು ನೀಡಲಾಗಿರುತ್ತದೆ. ಇದಲ್ಲದೆ, ಗುತ್ತಿಗೆದಾರರು ವಿಸ್ತರಣಾ ಕಾರ್ಯವನ್ನು ಪೂರ್ಣಗೊಳಿಸದೆ ಇರುವುದರಿಂದ ಮತ್ತು ವಾರ್ಷಿಕ ಗುತ್ತಿಗೆ ಹಣವನ್ನು ಪಾವತಿ ಮಾಡದೇ ಇರುವುದರಿಂದ ಸಕ್ಕರೆ ನಿರ್ದೇಶನಾಲಯದಿಂದ ದಿನಾಂಕ 30.05.2020 ರಂದು ಕಾರಣ ಕೇಳಿ ನೋಟೀಸನ್ನು ಸಹ ಜಾರಿಗೊಳಿಸಲಾಗಿರುತ್ತದೆ.

ದಿನಾಂಕ 07.07.2020 ರಂದು ಕಾರ್ಖಾನೆಗೆ ನಾನು ಖುದ್ದಾಗಿ ಭೇಟಿ ನೀಡಿ, ಸ್ಥಳ ಪರಿಶೀಲನೆ ನಡೆಸಿದ್ದು, ದಿನಾಂಕ 08.07.2020 ರಂದು ಗುತ್ತಿಗೆದಾರರೊಡನೆ ಸಭೆ ಜರುಗಿಸಿ ಕಾರ್ಖಾನೆಯನ್ನು ರೈತರ ಹಿತದೃಷ್ಟಿಯಿಂದ ಜರೂರಾಗಿ ಪ್ರಾರಂಭಿಸಲು ಮತ್ತು ಕಾರ್ಖಾನೆ ಪ್ರಾರಂಭಿಸುವ ಮುಂಚಿತವಾಗಿ ಬಾಕಿಯಿರುವ ಗುತ್ತಿಗೆ ಮೊಬಲಗನ್ನು ಪಾವತಿಸಲು ಸೂಚನೆಗಳನ್ನು ನೀಡಲಾಗಿದೆ. ಇದಕ್ಕೆ ಗುತ್ತಿಗೆದಾರರು ಸಹ ಸಕಾರಾತ್ಮಕವಾಗಿ ಪ್ರತಿಕ್ರಿಯಿಸಿರುತ್ತಾರೆ.

ಹೇಮಾವತಿ ಸಹಕಾರಿ ಸಕ್ಕರೆ ಕಾರ್ಖಾನೆಯಲ್ಲಿ 2018-19ನೇ ಸಾಲಿನವರೆಗೆ ಲೆಕ್ಕಪರಿಶೋಧನೆಯು ಪೂರ್ಣಗೊಂಡಿದ್ದು, ಲೆಕ್ಕಪರಿಶೋಧಕರು, ಗುತ್ತಿಗೆದಾರರು ಕರಾರು ಒಪ್ಪಂದದ ರೀತ್ಯಾ ನಿಗಧಿತ ಕಾಲಾವಧಿಯಲ್ಲಿ ಗುತ್ತಿಗೆ ಮೊಬಲಗು ಪಾವತಿ ಮಾಡದೇ ಇರುವ ಹಿನ್ನೆಲೆಯಲ್ಲಿ ಬಡ್ಡಿಯನ್ನು ಸೇರಿಸಿ ಬಾಡಿಗೆ ಮೊಬಲಗು ವಸೂಲಾತಿ ಕೈಗೊಳ್ಳಲು ನಿರ್ದೇಶಿಸಿರುತ್ತಾರೆ. ಟಿ.ಡಿ.ಎಸ್, ಜಿ.ಎಸ್.ಟಿ. ಹಾಗೂ ಆದಾಯ ತೆರಿಗೆ ರಿಟರ್ನ್‌ಗಳನ್ನು ನಿಗಧಿತ ಕಾಲಾವಧಿಯಲ್ಲಿ ಸಲ್ಲಿಸದೇ ಇರುವ ಬಗ್ಗೆ ಆಕ್ಷೇಪಿಸಿರುತ್ತಾರೆ. ಈ ಕುರಿತಂತೆ ಅಗತ್ಯಕ್ರಮ ಕೈಗೊಂಡಿದ್ದು, ನಿಗಧಿತ ಕಾಲಾವಧಿಯೊಳಗೆ ರಿಟರ್ನ್ಸ್‌ಗಳನ್ನು ಸಲ್ಲಿಸಲು ಕ್ರಮವಿಡಲಾಗಿರುತ್ತದೆ. ಪೆಟ್ರೋಲ್ ದಾಸ್ತಾನಿನಲ್ಲಿ 1328 ಲೀಟರ್ ನಷ್ಟ ಉಂಟಾಗಿದ್ದು, ಸದರಿ ನಷ್ಟವು ಪೆಟ್ರೋಲ್ ಆವಿಯಿಂದಾಗಿ (Evaporation) ಉಂಟಾಗಿರುವ ವ್ಯತ್ಯಾಸವಾಗಿರುತ್ತದೆ. ಈ ಬಗ್ಗೆ ಆಡಳಿತ ಮಂಡಲಿಯಲ್ಲಿಟ್ಟು, ಪರಿಶೀಲಿಸಿ ಕ್ರಮ ಕೈಗೊಳ್ಳಲಾಗುತ್ತಿದೆ.

ಕಾರ್ಖಾನೆಯ ಲೆಕ್ಕಪರಿಶೋಧಕರು ಬೈಲಾಗೆ ವಿರುದ್ಧವಾಗಿ ನಗದು ಶಿಲ್ಕು ಮಿತಿ (ಬೈಲಾದನ್ವಯ ರೂ.3.00 ಲಕ್ಷಗಳು) ಮೀರಿ ವ್ಯವಹಾರ ಕೈಗೊಂಡಿರುವ ಬಗ್ಗೆ ಮತ್ತು ಅಖೈರು ಶಿಲ್ಕು ಪರಿಶೀಲನೆ ಕೈಗೊಳ್ಳದೇ ಇರುವ ಬಗ್ಗೆ ಆಕ್ಷೇಪಿಸಿರುತ್ತಾರೆ. ಕಾರ್ಖಾನೆಯಡಿಯಲ್ಲಿ ಪೆಟ್ರೋಲ್ ಬಂಕ್ ಸಹ ಕಾರ್ಯನಿರ್ವಹಣೆ ಮಾಡುತ್ತಿದ್ದು, ರಜಾ ದಿನಗಳಲ್ಲಿ ಮಾರಾಟದ ಮೊಬಲಗನ್ನು ಬ್ಯಾಂಕಿಗೆ ಪಾವತಿಸಲು ಸಾಧ್ಯವಾಗದಿರುವುದರಿಂದ ನಂತರದ ದಿನಾಂಕದಲ್ಲಿ ಪೂರ್ಣವಾಗಿ ಜಮಾಗೊಳಿಸಿರುವುದು ಅಖೈರು ಶಿಲ್ಕು ಹೆಚ್ಚುವರಿಯಾಗಲು ಕಾರಣವಾಗಿರುತ್ತದೆ. ನಗದು ವ್ಯವಹಾರ ನಿರ್ವಹಿಸುವವರಿಂದ ಭದ್ರತೆ ಪಡೆಯುವ ಬಗ್ಗೆ ಕ್ರಮ ಕೈಗೊಳ್ಳುವುದಾಗಿ ಹಾಗೂ ಅಖೈರು ಶಿಲ್ಕು ಮಿತಿಯ ಬಗ್ಗೆ ಮುಂದಿನ ವಾರ್ಷಿಕ ಮಹಾಸಭೆಯಲ್ಲಿ ಬೈಲಾ ತಿದ್ದುಪಡಿ ಮಾಡಲು ಕ್ರಮ ಕೈಗೊಳ್ಳಲಾಗುವುದೆಂದು ಕಾರ್ಖಾನೆಯ ವ್ಯವಸ್ಥಾಪಕ ನಿರ್ದೇಶಕರು ವರದಿಸಿರುತ್ತಾರೆ.

ಕಾರ್ಖಾನೆಯ ಪ್ರಸ್ತುತ ಆಡಳಿತ ಮಂಡಳಿಯ ಪದಾವಧಿಯು ಮಾರ್ಚ್ 2016ರಲ್ಲಿ ಮುಕ್ತಾಯಗೊಂಡಿರುತ್ತದೆ. ಈ ಸಂಬಂಧವಾಗಿ ಮಾನ್ಯ ಉಚ್ಚ ನ್ಯಾಯಾಲಯ, ಬೆಂಗಳೂರು ಇಲ್ಲಿ ರಿಟ್ ಅರ್ಜಿ ಸಂಖ್ಯೆ 13783-13784/2016 ದಾಖಲಾಗಿದ್ದು, ಸದರಿ ಪ್ರಕರಣದಲ್ಲಿ ಮಾನ್ಯ ಉಚ್ಚ ನ್ಯಾಯಾಲಯವು ದಿನಾಂಕ 16.03.2016 ರಂದು ಆದೇಶ ನೀಡಿ ಸಹಕಾರ ಚುನಾವಣಾ ಪ್ರಾಧಿಕಾರವು ಚುನಾವಣೆಯನ್ನು ಕೈಗೊಳ್ಳುವವರೆಗೆ ಹಾಲಿ ಇರುವ ಆಡಳಿತ ಮಂಡಳಿಯನ್ನು ಮುಂದುವರೆಸಬೇಕೆಂದು ಮತ್ತು ರಾಜ್ಯ ಸರ್ಕಾರವು ಆಡಳಿತಾಧಿಕಾರಿಯನ್ನು ನೇಮಕ ಮಾಡಬಾರದೆಂದು ಆದೇಶಿಸಿರುತ್ತದೆ. ಈ ಹಿನ್ನೆಲೆಯಲ್ಲಿ ಕಾರ್ಖಾನೆಯ ಪ್ರಸ್ತುತ ಆಡಳಿತ ಮಂಡಳಿಯು ಮುಂದುವರೆದಿರುತ್ತದೆ ಎಂದು ತಿಳಿಸ ಬಯಸುತ್ತೇನೆ.

---

ಸಿಐ 199 ಸಿಓಎಫ್ 2020

(ಅರಬೈಲ್ ಶಿವರಾಮ ಹೆಬ್ಬಾರ)
ಕಾರ್ಮಿಕ ಮತ್ತು ಸಕ್ಕರೆ ಸಚಿವರು